# ವಿಶ್ವನಂದಿನಿ ಲೇಖನಮಾಲೆ – 236

## ದೇವರ ಪೂಜೆಯಿಂದ ದೊರೆಯುವ ಪುಣ್ಯ

ದೇವರ ಪೂಜೆ ಎಂಬ ಶಬ್ದದ ಅರ್ಥವೇನು ಮತ್ತು, ದೇವರ ಪೂಜೆಯನ್ನು ಯಾಕಾಗಿ ಮಾಡಬೇಕು ಎನ್ನುವದಕ್ಕೆ ಗೀತೆ ಮತ್ತು ಶ್ರೀಮದಾಚಾರ್ಯರು ನೀಡಿದ ಐದು ಕಾರಣಗಳನ್ನು ತಿಳಿದೆವು.
ಈಗ ದೇವರ ಪೂಜೆಯಿಂದ ಎಷ್ಟು ಪುಣ್ಯವನ್ನು ಗಳಿಸುತ್ತೇವೆ  ಎನ್ನುವದರ ಕುರಿತು ತಿಳಿಯೋಣ.

ಭಗವಂತನನ್ನು ಪಡೆಯುವ ಸಾಧನಗಳಲ್ಲಿ ಯಾವುದು ಉತ್ತಮ, ಯಾವುದು  ಅತ್ಯುತ್ತಮ, ಸರ್ವೋತ್ತಮ ಹಾಗೂ ಯಾವ ಸಾಧನೆಯಿಂದ ಎಷ್ಟು ಫಲ ಎಂದು ಶ್ರೀಮದಾಚಾರ್ಯರು ತಂತ್ರಸಾರಸಂಗ್ರಹದಲ್ಲಿ ತಿಳಿಸುತ್ತಾರೆ —

**ಶೌಚಾಸನೇ ತ್ವಂಗಮಾತ್ರಂ**
**ನ ಪೃಥಗ್ ಧರ್ಮಕಾರಣಮ್**
**ಪ್ರಾಣಾಯಾಮಾದಯಸ್ತುಷ್ಟಿ-**
**ಪರ್ಯಂತಾ ದ್ವಿಗುಣಾಧಿಕಾಃ**

**ಸ್ವಾಧ್ಯಾಯೋತಃ ಕೋಟಿಗುಣಃ**
**ತತೋನಂತಗುಣಾ ಹರೇಃ**
**ಪೂಜಾಽತಸ್ತ್ರಿಗುಣಂ ಧ್ಯಾನಂ**
**ಇತಿ ಧರ್ಮಕ್ರಮಃ ಸ್ಮೃತಃ ಎಂದು.**

ಶ್ರೀಮದಾಚಾರ್ಯರ ಈ ವಚನಗಳ ಮತ್ತು ಇದರ ಹಿಂದಿನ ವಚನಗಳ ಪರಿಸ್ಪಷ್ಟ ಅಭಿಪ್ರಾಯವನ್ನು ಶ್ರೀ ನಾರಾಯಣಪಂಡಿತಾಚಾರ್ಯ ತಮ್ಮ ಯೋಗದೀಪಿಕೆಯಲ್ಲಿ ತಿಳಿಸುತ್ತಾರೆ —

**ಶೌಚಮಾಸಾ ಚ ಧರ್ಮಾಂಗೇ**
**ಪ್ರಾಣಾಯಾಮೋಽಪರಿಗ್ರಹಃ**
**ಅಹಿಂಸಾ ಸತ್ಯಮಸ್ತೇಯಂ**
**ಬ್ರಹ್ಮಚರ್ಯಾ ತಪಸ್ತಥಾ**

**ತುಷ್ಟಿರ್ಯಜ್ಞಾದಯೋ ಧರ್ಮಾಃ**
**ಸ್ವಾಧ್ಯಾಯೋಽಭ್ಯರ್ಚನಂ ಹರೇಃ**
**ಧಾರಣಾ ಶ್ರವಣಂ ಚಾಥ**
**ಮನನಂ ಧ್ಯಾನಮೇವ ಚ**

**ಸಮಾಧಿರ್ನಿಗಮಾಂತಾನಾಂ**
**ವ್ಯಾಖ್ಯಾನಂ ಭಕ್ತಿರೇವ ಚ**

## ಉತ್ತರೋತ್ತರಮೇತಾನಿ ಕರ್ತವ್ಯಾನಿ ವಿಶೇಷತಃ

ದೇಹ ಮನಸ್ಸುಗಳನ್ನು ಪರಿಶುದ್ಧವಾಗಿಟ್ಟು-ಕೊಳ್ಳುವದು ಶೌಚ. ಪದ್ಮಾಸನ, ಸ್ವಸ್ತಿಕಾಸನ ಮುಂತಾದವು ಆಸನಗಳು. ಶ್ರೀಹರಿಯನ್ನು ಪಡೆಯುವಲ್ಲಿ ಇವು ಅತ್ಯವಶ್ಯವಾದ ಸಾಧನಗಳು. ಆದರೆ, ಇವುಗಳಿಂದ ಪ್ರತ್ಯೇಕವಾಗಿ ಪುಣ್ಯ ಲಭಿಸುವದಿಲ್ಲ[1]. ಆದರೆ ಮುಂದಿನ ಎಲ್ಲ ಸಾಧನಗಳ ಫಲವನ್ನು ಪಡೆಯಬೇಕಾದರೆ ಇವಿರಲೇ ಬೇಕು. ದೇಹದ ಶುದ್ಧಿ ಮನಸ್ಸಿನ ಶುದ್ದಿ ಇಲ್ಲವಾದಲ್ಲಿ ಎಷ್ಟು ಅರ್ಚನೆ, ಅಧ್ಯಯನ, ಅಧ್ಯಾಪನ ಮಾಡಿದರೂ ಫಲ ದೊರೆಯವುದೇ ಇಲ್ಲ.

ಮಲವಿಸರ್ಜನೆ ಮಾಡಿ ಕೈ ಕಾಲು ತೊಳೆಯದೆ, ದೇಹ ಶುದ್ಧಿ ಮಾಡಿಕೊಳ್ಳದೇ ತುಳಸಿಯನ್ನು ಸಾಲಿಗ್ರಾಮದ ಮೇಲೆ ಹಾಕಿದರೆ ಅದು ಅರ್ಚನೆಯಾಗುವದಿಲ್ಲ, ಅದರಿಂದ ಸತ್ಫಲ

---

[1] ಸದಾಚಾರಸ್ಮೃತಿಯ ಉಪನ್ಯಾಸ ಮತ್ತು ಲೇಖನಗಳಲ್ಲಿ ವಿಸ್ತೃತವಾಗಿ ವಿವರಿಸಿದ್ದೇನೆ.

ಬರುವದು ದೂರ ಉಳಿಯಿತು ಮಹಾಪಾಪವೇ ಬರುತ್ತದೆ. ಹಾಗೆ, ಮನಸ್ಸಿನಲ್ಲಿ ಕಾಮಕ್ರೋಧಗಳನ್ನು ತುಂಬಿಕೊಂಡು ಅದೆಷ್ಟು ಅರ್ಚನೆ ಮಾಡಿದರೂ ಫಲವಿಲ್ಲ. **ಮಲಿನಾನಿ ಮನಾಂಸಿ ಕುತಃ ಕರಣಮ್,** ಕೊಳೆಯಾದ ಮನಸ್ಸಿನಿಂದ ಹರಿಯನ್ನು ಪಡೆಯಲು ಸಾಧ್ಯವಿಲ್ಲ ಎಂದು ಶ್ರೀಮದಾಚಾರ್ಯರು ಸ್ಪಷ್ಟವಾಗಿ ತಿಳಿಸುತ್ತಾರೆ. ಹೀಗಾಗಿ ಈ ಶೌಚ, ಆಸನಗಳು ಎಲ್ಲ ಸಾಧನೆಗಳ ಫಲವನ್ನು ಪಡೆಯಲಿಕ್ಕಾಗಿ ಇರುವ ಅಂಗಗಳು.

ಇನ್ನು ಮುಂದಿನ ಸಾಧನೆಗಳಿಂದ ಎಷ್ಟೆಷ್ಟು ಪುಣ್ಯ ಲಭಿಸುತ್ತದೆ ಎನ್ನುವದನ್ನು ಪಂಡಿತಾಚಾರ್ಯರು ತಿಳಿಸುತ್ತಾರೆ —

ನಾವು ಪ್ರಾಣಾಯಾಮದಿಂದ ಮಾಡುವದರಿಂದ ಪರಮಾತ್ಮ ಪ್ರೀತನಾಗುತ್ತಾನೆ. ಪ್ರಾಣಾಯಾಮ-ದಿಂದ ಪರಮಾತ್ಮ ಎಷ್ಟು ಪ್ರೀತನಾಗುತ್ತಾನೆಯೋ ಅದಕ್ಕಿಂತ ಎರಡು ಪಟ್ಟು ಅಪರಿಗ್ರಹದಿಂದ ಅಂದರೆ ನಾವು ಯಾರನ್ನೂ ಯಾಚಿಸದೇ ಬದುಕುವದರಿಂದ ಪ್ರೀತನಾಗುತ್ತಾನೆ.

ಅದರ ಎರಡು ಪ್ರೀತಿ ಅಹಿಂಸೆಯಿಂದ — ಯಾರನ್ನೂ ಹಿಂಸೆ ಮಾಡದೇ ಇರುವದರಿಂದ — ಉಂಟಾಗುತ್ತದೆ.

ಅದರ ಎರಡು ಪಟ್ಟು ಭಗವತ್ಪ್ರೀತಿ ಸತ್ಯದಿಂದ — ಅಂದರೆ ಎಂದಿಗೂ ಸುಳ್ಳು ಮಾತನಾಡದೇ ಇರುವದರಿಂದ — ಉಂಟಾಗುತ್ತದೆ.

ಅದರ ಎರಡು ಪಟ್ಟು ಪ್ರೀತಿ ಅಸ್ತೇಯದಿಂದ — ಕಳ್ಳತನ ಮಾಡದೇ ಇರುವದರಿಂದ — ಉಂಟಾಗುತ್ತದೆ.

ಅದರ ಎರಡು ಪಟ್ಟು ಪ್ರೀತಿ ಬ್ರಹ್ಮಚರ್ಯದಿಂದ — ಇಂದ್ರಿಯ ನಿಗ್ರಹದಿಂದ — ಉಂಟಾಗುತ್ತದೆ.

ಅದರ ಎರಡು ಪಟ್ಟು ಪ್ರೀತಿ ತಪಸ್ಸಿನಿಂದ — ದೇಹದಂಡನೆಯಿಂದ — ಉಂಟಾಗುತ್ತದೆ.

ಅದರ ಎರಡು ಪಟ್ಟು ಪ್ರೀತಿ ತುಷ್ಟಿಯಿಂದ — ಬಂದ ಕೆಟ್ಟದ್ದನ್ನಾಗಲೀ, ಒಳ್ಳೆಯದನ್ನಾಗಲೀ

ಸಂತೋಷದಿಂದ ಅನುಭವಿಸುವದರಿಂದ — ಉಂಟಾಗುತ್ತದೆ.

ಅದರ ಎರಡು ಪಟ್ಟು ಪ್ರೀತಿ ಯಜ್ಞಾದಿಧರ್ಮಗಳಿಂದ — ಅಗ್ನಿಹೋತ್ರಾದಿ ಧರ್ಮಗಳ ಆಚರಣೆಯಿಂದ — ಉಂಟಾಗುತ್ತದೆ.

ಅಂದರೆ, ಪ್ರಾಣಾಯಾಮದಿಂದ ಉಂಟಾಗುವ ಪ್ರೀತಿಗಿಂತ ಹದಿನಾಲ್ಕುಪಟ್ಟು ಹೆಚ್ಚಿನ ಭಗವತ್ಪ್ರೀತಿ ಅಗ್ನಿಹೋತ್ರಾದಿಧರ್ಮಗಳಿಂದ ಪಡೆಯುತ್ತೇವೆ.

ಈ ಅಗ್ನಿಹೋತ್ರಾದಿಗಳಿಗಿಂತ ಕೋಟಿಪಟ್ಟು ಮಿಗಿಲಾದ ಪ್ರೀತಿಯನ್ನು ಸ್ವಾಧ್ಯಾಯ[2]ದಿಂದ — ನಮ್ಮನಮ್ಮ ವೇದಶಾಖೆಗಳ ಮಂತ್ರಗಳನ್ನು ಕಲಿಯುವದರಿಂದ — ಪಡೆಯುತ್ತೇವೆ.

**“ಸ್ವಾಧ್ಯಾಯೋಽತಃ ಕೋಟಿಗುಣಃ”**

---

[2] ಇಲ್ಲಿ ಸ್ವಾಧ್ಯಾಯ ಎಂದರೆ ವೇದಾಂತಶಾಸ್ತ್ರದ ಶ್ರವಣವಲ್ಲ. ತಮ್ಮತಮ್ಮ ಶಾಖೆಯ ವೇದದ ಅಧ್ಯಯನ ಮಾತ್ರ. ಶಾಸ್ತ್ರದ ಶ್ರವಣ ಇದಕ್ಕಿಂತ ಮಿಗಿಲಾದದ್ದು. ಮುಂದೆ ಹೇಳುತ್ತಾರೆ.

ಸ್ವಾಧ್ಯಾಯದಿಂದ ಎಷ್ಟು ಪುಣ್ಯ ಒದಗುತ್ತದೆಯೋ ಅದರ ಅನಂತಪಟ್ಟು ಪುಣ್ಯ ದೇವರ ಪೂಜೆಯಿಂದ ಬರುತ್ತದೆ. **“ತತೋನಂತಗುಣಾ ಹರೇಃ ಪೂಜಾ”** ನೋಡಿ. ದೇವರ ಪೂಜೆ ಎಷ್ಟು ಮಹತ್ತ್ವದ್ದು. ಎಷ್ಟು ಪುಣ್ಯವನ್ನು ನೀಡುತ್ತದೆ. ಎಂದು.

ಸ್ವಾಧ್ಯಾಯ ಎಂದರೆ ವೇದಾಧ್ಯಯನ. ನಮ್ಮನಮ್ಮ ವೇದಶಾಖೆಯ ಅಧ್ಯಯನದಿಂದ ಎಷ್ಟು ಪುಣ್ಯ ಗಳಿಸುತ್ತೇವೆಯೋ ಅದಕ್ಕಿಂತ ಅನಂತಪಟ್ಟು ಪುಣ್ಯ ಸಾಲಿಗ್ರಾಮ ಪ್ರತಿಮೆಗಳಿಗೆ ಪೂಜೆಯನ್ನು ಸಲ್ಲಿಸುವದರಿಂದ ಬರುತ್ತದೆ.

ಇಷ್ಟು ಪುಣ್ಯ ಉಂಟಾಗುವದರಿಂದಲೇ, ನಾವು ಇಡಿಯ ಆಯುಷ್ಯ ಪಾಪಿಗಳಾಗದೇ ಉಳಿಯಲು ಸಾಧ್ಯವಾಗುತ್ತದೆ. ಪೂಜೆ ಮಾಡಲಿಲ್ಲ ಎಂದಲ್ಲಿ ಸಹಜವಾಗಿ ಪಾಪಗಳನ್ನು ಮಾಡಿ ಗೀತೆ ಹೇಳಿದಂತೆ ಅಘಾಯುಗಳಾಗಿಬಿಡುತ್ತೇವೆ ಅರ್ಥಾತ್ ಇಡಿಯ ಆಯುಷ್ಯದಿಂದ ಪಾಪ ಮಾಡಿಬಿಡುತ್ತೇವೆ.

ಈ ದೇವರ ಪೂಜೆಗಿಂತಲೂ ಮಿಗಿಲಾದದ್ದು, ಧಾರಣಾ ಅರ್ಥಾತ್ ಶ್ರೀಹರಿಯ ರೂಪ, ನಾಮ, ಮಾಹಾತ್ಮ್ಯಗಳ ಚಿಂತನೆ

ಧಾರಣಾಕ್ಕಿಂತಲೂ ಮಿಗಿಲಾದ ಪುಣ್ಯವನ್ನು ನೀಡುವ ಸತ್ಕರ್ಮ ಶ್ರವಣ, ಅಂದರೆ ಗುರುಗಳ ಪಾದದಡಿಯಲ್ಲಿ ಕುಳಿತು ಮಾಡುವ ವೇದಾಂತಶಾಸ್ತ್ರದ ಅಧ್ಯಯನ.

ಈ ಶ್ರವಣಕ್ಕಿಂತಲೂ ಮಿಗಿಲಾದ ಪುಣ್ಯ ನೀಡುವ ಸತ್ಕರ್ಮ ಮನನ, ಅಂದರೆ ಕಲಿತ ತತ್ವವನ್ನು ಯುಕ್ತಿಪೂರ್ವಕವಾಗಿ ನಿರ್ಧರಿಸಿಕೊಳ್ಳುವ ಪ್ರಕ್ರಿಯೆ.

ಈ ಮನನಕ್ಕಿಂತಲೂ ಮಿಗಿಲಾದ ಸತ್ಕರ್ಮ ಧ್ಯಾನ — ಮನಸ್ಸಿನಲ್ಲಿ ಸರ್ವೋತ್ತಮನಾದ ಶ್ರೀಹರಿಯನ್ನು ಚಿಂತಿಸುವದು.

ಈ ಧ್ಯಾನಕ್ಕಿಂತಲೂ ಮಿಗಿಲಾದದ್ದು ಸಮಾಧಿ, ಅಂದರೆ, ದೇಹದ ಮೇಲಿನ ಅಭಿಮಾನವನ್ನೂ ಮೀರಿ ಮನಸ್ಸಿನಲ್ಲಿ ದೇವರನ್ನು ಧೇನಿಸುವದು[3].

ಈ ಸಮಾಧಿಗಿಂತಲೂ ಮಿಗಿಲಾದದ್ದು ವೇದ-ವೇದಾಂತಶಾಸ್ತ್ರದ ವ್ಯಾಖ್ಯಾನ, ಅಂದರೆ ಶಿಷ್ಯರಿಗೆ ಪಾಠ ಹೇಳುವುದು, ಮೂಲಗ್ರಂಥಗಳ ವ್ಯಾಖ್ಯಾನ ಮಾಡುವದು.

ಈ ವ್ಯಾಖ್ಯಾನಕ್ಕಿಂತ ಮಿಗಿಲಾದದ್ದು ಭಕ್ತಿ — ಅಂದರೆ ತಿಳಿದ ಸಕಲ ಜ್ಞಾನಪೂರ್ವಕವಾಗಿ ಶ್ರೀಹರಿಯಲ್ಲಿ ಮಾಡುವ ನಿರಂತರ ಪ್ರೇಮ. ಇದರಿಂದಲೇ ಅಪರೋಕ್ಷಜ್ಞಾನ.

ಹೀಗೆ, ಭಗವಂತನ ಪ್ರಾಪ್ತಿಗೆ ಅತ್ಯವಶ್ಯಕವಾದ ಶೌಚದಿಂದ ಭಕ್ತಿಯವರೆಗಿನ 20 ಸಾಧನಗಳಲ್ಲಿ 13ನೆಯ ಮೆಟ್ಟಿಲಾದ ದೇವರ ಪೂಜೆ ಎನ್ನುವ

---

[3] ಸಮಾಧಿಯ ಪರಿಪಾಕಾವಸ್ಥೆಯಲ್ಲಿ ಸಾಧಕನ ದೇಹದ ಅವಯವವನ್ನು ಕತ್ತರಿಸಿದರೂ ಅದರ ಎಚ್ಚರವೂ ಸಾಧಕನಿಗೆ ಇರುವದಿಲ್ಲ. ದೇಹದ ಮೇಲೆ ಅಭಿಮಾನವಿದ್ದಾಗ ಮನಸ್ಸಿನಲ್ಲಿ ಹರಿಯ ರೂಪವನ್ನು ಚಿಂತಿಸಿದರೆ ಧ್ಯಾನ. ಅಭಿಮಾನವನ್ನು ಮೀರಿ ಚಿಂತಿಸಿದರೆ ಸಮಾಧಿ.

ಸಾಧನ ನಮಗೆ ಅನಂತ ಪುಣ್ಯವನ್ನು ನೀಡುವ ದಿವ್ಯಸಾಧನ.

ಅತ್ಯಂತ ಸುಲಭವಾಗಿ ಮಾಡಲಿಕ್ಕೆ ಸಾಧ್ಯವಾಗುವ ಈ ದೇವರಪೂಜೆಯಿಂದ ಇಷ್ಟು ಮಿಗಿಲಾಗಿ ಒಲಿಯುವ ಆ ಸ್ವಾಮಿಯ ಕಾರುಣ್ಯಕ್ಕೆ ಎಣೆಯಿಲ್ಲ.

## ತಿಳಿಯಬೇಕಾದ ಕೆಲವು ಅಂಶಗಳು

ಪ್ರಾಣಾಯಾಮಾದಿಗಳಿಗಿಂತ, ಸ್ವಾಧ್ಯಾಯಕ್ಕಿಂತ ಮಿಗಿಲು. ಸ್ವಾಧ್ಯಾಯಕ್ಕಿಂತ ದೇವರ ಪೂಜೆ ಮಿಗಿಲು. ಆದ್ದರಿಂದ ನಾನು ದೇವರ ಪೂಜೆ ಮಾಡುತ್ತೇನೆ, ಸ್ವಾಧ್ಯಾಯ ಮಾಡುವದಿಲ್ಲ ಎಂದರೆ ನಡೆಯುವದಿಲ್ಲ.

ಸ್ವಾಧ್ಯಾಯವನ್ನೂ ಮಾಡಲೇಬೇಕು. ದೇವರಪೂಜೆಯನ್ನೂ ಮಾಡಲೇಬೇಕು.

ಶ್ರವಣದಿಂದ ಆರಂಭಿಸಿ ಮುಂದಿನ ಸಾಧನಗಳನ್ನು ಮಾಡಲು ಸಾಧ್ಯವಿದ್ದಾಗ ಹಿಂದಿನದನ್ನು ಸಂಕೋಚ ಮಾಡಬಹದು ಎಂದು ಶ್ರೀಮದಾಚಾರ್ಯರು ಅನುವ್ಯಾಖ್ಯಾನದಲ್ಲಿ ತಿಳಿಸುತ್ತಾರೆ — ಸೌಲಭ್ಯೇ ಶ್ರವಣಾದೀನಾಂ ಅನ್ಯತ್ ಸಂಕೋಚಮರ್ಹತಿ ಎಂದು.

ಗುರುಗಳಿದ್ದು ಅವರಿಂದ ವೇದಾಂತಾದಿ-ಶಾಸ್ತ್ರಗಳನ್ನು ಕಲಿಯಲು ಅನುಕೂಲವಿದ್ದಾಗ ದೇವರ ಪೂಜೆ ಮುಂತಾದವನ್ನು ಸಂಕೋಚ ಮಾಡಬಹುದೇ ಹೊರತು, ಲೋಪ ಮಾಡುವಂತಿಲ್ಲ

ಎಂದು. ಹೀಗಾಗಿ ದೇವರ ಪೂಜೆ ಮಾಡುತ್ತೇನೆ ಆದ್ದರಿಂದ ಸ್ವಾಧ್ಯಾಯ ಬಿಡುತ್ತೇನೆ, ಶ್ರವಣ ಮಾಡುತ್ತೇನೆ ಆದ್ದರಿಂದ ದೇವರಪೂಜೆ ಬಿಡುತ್ತೇನೆ ಎನ್ನುವಂತಿಲ್ಲ ಮಾಡಲೇಬೇಕು.

ಮತ್ತೂ, ದೇವರಪೂಜೆಯನ್ನು ಪ್ರತೀಜನ್ಮದಲ್ಲಿಯೂ ಶ್ರದ್ಧೆಯಿಂದ ಮಾಡಿದಾಗ ಮಾತ್ರ ಗುರುಗಳು ದೊರೆತು ಅವರಿಂದ ಶಾಸ್ತ್ರಾಧ್ಯಾಯನ ಮಾಡಲು ಸಾಧ್ಯ. ಹೀಗಾಗಿ, ಅನಂತಸಂಖ್ಯೆಯಲ್ಲಿ ದೇವರ ಪ್ರೀತಿಯನ್ನು ಒದಗಿಸಿಕೊಡುವ ದೇವರಪೂಜೆ ಎಂಬ ಮಹಾಸತ್ಕರ್ಮವನ್ನು ಪ್ರತೀದಿವಸವೂ ಪ್ರತಿಯೊಬ್ಬರೂ ಆಚರಿಸಬೇಕು.

ದೇವರ ಪೂಜೆಯಿಂದ ಉಂಟಾಗುವ ಇತರ ಮಹಾಪ್ರಯೋಜನಗಳನ್ನು ಮುಂದಿನ ಲೇಖನದಲ್ಲಿ ತಿಳಿಸುತ್ತೇನೆ.

ಶಾಸ್ತ್ರೋಕ್ತವಾದ ಕ್ರಮದಲ್ಲಿ, ಭಕ್ತಿಪೂರ್ವಕವಾಗಿ ನಿಮ್ಮಿಂದ ದೇವರಪೂಜೆ ನಡೆಯಲಿ ಎಂಬ ಹಾರೈಕೆಯೊಂದಿಗೆ

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

**ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ**

**ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.**

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **NEW IFSC** **SBIN0040076**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, “Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India
WhatsApp: 9901 551 491